## ಅಪರೂಪದ ಕೆಳದಿ ಚೆನ್ನಮ್ಮರ ಚಿತ್ರ

ಕೆಳದಿ ಚೆನ್ನಮ್ಮ ಕನ್ನಡದ ವೀರ ವನಿತೆ. ಅವರು ಪಟ್ಟಾಭಿಷಿಕ್ತರಾಗಿ 350 ವರ್ಷ ಸಂದಿದೆ. ಛತ್ರಪತಿ ಶಿವಾಜಿಯ ಮೊದಲ ಮಗ ಸಾಂಬಾಜಿಯನ್ನು ಕೊಂದ ಔರಂಗಜೇಬ, ಎರಡನೇ ಮಗ ರಾಜಾರಾಮನನ್ನು ಕೊಂದು ಸಾಮ್ರಾಜ್ಯವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದ. ಆಗ ರಾಜಾರಾಮನು ಸನ್ಯಾಸಿಯ ವೇಷತೊಟ್ಟು ಚೆನ್ನಮ್ಮರ ಬಳಿ ರಕ್ಷಣೆ ಕೋರಿ ಬರುತ್ತಾನೆ. ಅವನಿಗೆ ರಕ್ಷಣೆ ನೀಡುವ ಚೆನ್ನಮ್ಮ ಮೊಘಲ್ ಸೇನೆಯನ್ನು ಸೋಲಿಸಿ ಖ್ಯಾತಿ ಪಡೆಯುತ್ತಾರೆ.

ಚೆನ್ನಮ್ಮರ ಕುರಿತು ಕೆಲ ಮಾಹಿತಿಗಳನ್ನು ಪಡೆಯಲು ನಮ್ಮೂರಿನ ಹಿರಿಯರಾದ ಸುನಂದಾ ಶಶಿಭೂಷಣ ಕುಮಾರ್ ಅವರ ಬಳಿ ತೆರಳಿದೆ. ಮಾತಿಗೆ ನಿಂತ ಅವರು ಹಲವು ಮಾಹಿತಿಯ ಜೊತೆಗೆ ಪುರಾತನ ಕಾಲದ ಚಿತ್ರವೊಂದರ ಬಗ್ಗೆ ಪ್ರಸ್ತಾಪಿಸಿದರು. ಅದುವೇ ಚೆನ್ನಮ್ಮರ ಚಿತ್ರ. 'ಈ ಚಿತ್ರವನ್ನು ಕವಲೇದುರ್ಗದಲ್ಲಿರುವ ಮತ್ತಿನ ಮಠದ ವೀರಭದ್ರ ಶಿವಾಚಾರ್ಯ ಸ್ವಾಮೀಜಿಯವರು ನನಗೆ ನೀಡಿದ್ದು, ಇದು ಅತ್ಯಂತ ಅಪರೂಪದ ಮತ್ತು ಬಹಳಷ್ಟು ಜನರು ನೋಡಿರದ ಕೆಳದಿ ಚೆನ್ನಮ್ಮರ ಚಿತ್ರ. ಈ ಚಿತ್ರದಲ್ಲಿ ಅವರು ಶಿವಾಜಿಯ ಮಗ ರಾಜಾರಾಮ ಮತ್ತು ತನ್ನ ಮಂತ್ರಿ ಮಂಡಲದೊಂದಿಗೆ ಕವಲೇದುರ್ಗದ ಕೋಟೆಯ ಮೇಲೆ ನಿಂತು, ಕೆಳಗಿರುವ ಮೊಘಲ್ ಸೈನ್ಯವನ್ನು ಎದುರಿಸುವ ತಂತ್ರ ಹೆಣೆಯುತ್ತಿರುವ ದೃಶ್ಯ' ಎಂದು ಆ ಫೋಟೊದ ಬಗ್ಗೆ ವಿವರಿಸಿದರು.

—ಅಂಜನ್ ಕಾಯ್ಕಿಣಿ, ಸಾಗರ



## ಧ್ಯಾನದಲ್ಲಿ ಬಾತು

ರಾಯಚೂರಿನ ಐತಿಹಾಸಿಕ ಮಾವಿನಕೆರೆಯಲ್ಲಿ ಧ್ಯಾನದ ಸ್ಥಿತಿಯಲ್ಲಿ ನಿಂತ ಈ ಹಕ್ಕಿ ಕಂಡು ನನ್ನ ಕ್ಯಾಮೆರಾ ಚಕ ಚಕನೇ ಫೋಟೊ ತೆಗೆಯಿತು. ವಿವಿಧ ಬಣ್ಣಗಳಿಂದ ಕೂಡಿದ ಈ ಹಕ್ಕಿ ಬಾತುಕೋಳಿಯ ಜಾತಿಯದ್ದಾಗಿದೆ. ದಾಸ, ಗೋರೆ ಎಂದು ಕರೆಯಲ್ಪಡುವ ಈ ಬಾತುಕೋಳಿಯನ್ನು ಇಂಗ್ಲೀಷ್‌ನಲ್ಲಿ ಇಂಡಿಯನ್ ಸ್ಪಾಟ್ ಬಿಲ್ ಡಕ್ ಅಥವಾ ಗ್ರೇ ಡಕ್ ಎಂದು ಕರೆಯುತ್ತಾರೆ. ನೋಡಲು ಅತ್ಯಾಕರ್ಷಕವಾಗಿದ್ದು, ಇದು ಸಸ್ಯಾಹಾರಿಯಾಗಿದೆ. ಹೊಳೆ, ಕೆರೆಗಳಲ್ಲಿ ಬೆಳೆಯುವ ಸಸ್ಯಗಳನ್ನು ತಿಂದು ಬದುಕುತ್ತದೆ. ವಿವಿಧ ಮಾಲಿನ್ಯಗಳಿಂದ ಪಕ್ಷಿ–ಸಂಕುಲ ಇಂದು ಅಳಿವಿನಂಚಿನಲ್ಲಿದೆ. ಸಾಮಾನ್ಯವಾಗಿ ಕಂಡು ಬರುವ ಹಕ್ಕಿಗಳು ಕೂಡ ಇಂದು ಕಣ್ಮರೆಯಾಗುತ್ತಿವೆ. ಹೀಗಾಗಿ ಪಕ್ಷಿಗಳ ಉಳಿವಿಗೆ ಚಿಂತಿಸಬೇಕಿದೆ.



—ಈರಣ್ಣ ಬೆಂಗಾಲಿ, ರಾಯಚೂರು



## ಎತ್ತರದ ಪಂಚಮುಖಿ ಆಂಜನೇಯ

ವಿಶ್ವದಲ್ಲೇ ಅತಿ ಎತ್ತರವಾದ ಪಂಚಮುಖಿ ಆಂಜನೇಯ ಮೂರ್ತಿಯ ಚಿತ್ರವಿದು. ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಬಿದನಹಳ್ಳಿಯಲ್ಲಿ ಇದು ತಲೆ ಎತ್ತಿದ್ದು, ಎತ್ತರ ಸುಮಾರು 161 ಅಡಿ. ಹನುಮಂತನ ಪಂಚ ಮುಖಗಳು ವರಾಹ, ಗರುಡ, ಹನುಮಂತ, ನರಸಿಂಹ ಹಾಗೂ ಹಯಗ್ರೀವ. ಈ ಮೂರ್ತಿ ಬಹಳ ಸುಂದರವಾಗಿಯೂ ಆಕರ್ಷಕವಾಗಿಯೂ ಭಕ್ತರನ್ನು ಆಕರ್ಷಿಸುತ್ತದೆ. ಇಂತಹ ಅತಿ ಎತ್ತರದ ಮೂರ್ತಿ ಬೆಂಗಳೂರಿಗೆ ಸಮೀಪದಲ್ಲಿದೆ ಎಂಬುದು ಹೆಮ್ಮೆಯ ವಿಷಯ. ಒನ್‌ಡೇ ಟ್ರಿಪ್ ಅನ್ನು ಇಲ್ಲಿಗೆ ಪ್ಲಾನ್ ಮಾಡಿಕೊಳ್ಳಬಹುದು.

—ಕೆ.ಎಸ್. ಸವಿತ, ಬೆಂಗಳೂರು

## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly